ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 12/1/2021

# ಸಂಪುಟ ಸಂಕ್ರಾಂತಿ

## ಬೆಳೆಯುತ್ತಲೇ ಇದೆ ಸಚಿವಾಕಾಂಕ್ಷಿಗಳ ಪಟ್ಟಿ

12-1-2021

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಜೆಪಿ ವರಿಷ್ಠರು ಅಳೆದೂ ಸುರಿದು ಸಂಪುಟ ವಿಸ್ತರಣೆಗೆ ಅಸ್ತು ಎಂದ ಬೆನ್ನಲ್ಲೇ ರಾಜ್ಯದಲ್ಲೀಗ ಪ್ರಭಾವಿ ಸಚಿವಾಕಾಂಕ್ಷಿಗಳನ್ನು ಓಲೈಸುವ ತೆರೆಮರೆ ಕಸರತ್ತುಗಳು ವೇಗ ಪಡೆದುಕೊಂಡಿದೆ. ಸಂಕ್ರಾಂತಿಗೆ ಮೊದಲೇ ನಡೆಯುತ್ತಿರುವ ಈ ಮೌನ ಕ್ರಾಂತಿ ನಡುವೆ ಪ್ರಮುಖ ಸಚಿವರ ಖಾತೆ ಬದಲಾಗಲಿದೆ ಎಂಬ ಚರ್ಚೆಗಳೂ ಹುಟ್ಟಿಕೊಂಡಿವೆ. ಬುಧವಾರ ಅಮಾವಾಸ್ಯೆ ಕಳೆದ ನಂತರ ಮಧ್ಯಾಹ್ನವೇ ನೂತನ ಸಚಿವರ ಪ್ರಮಾಣ ವಚನಕ್ಕೆ ಮುಹೂರ್ತ ನಿಗದಿಯಾಗಿದ್ದು, ಆಕಾಂಕ್ಷಿಗಳ ಒತ್ತಡ ತೀವ್ರಗೊಂಡಿದೆ. ಇನ್ನೂ ಕೆಲವು ಸಚಿವರು ಪ್ರಮುಖ ಖಾತೆಗಳ ಮೇಲೆ ಕಣ್ಣಿಟ್ಟು ಲಾಬಿ ಆರಂಭಿಸಿದ್ದಾರೆ. ಒಂದಿಬ್ಬರು ಸಚಿವರನ್ನು ಕೈಬಿಡಲು ಕೇಂದ್ರ ನಾಯಕರು ಸೂಚಿಸಿದ್ದಾರೆನ್ನುವ ಸುಳಿವು ಕೆಲವರ ಚಡಪಡಿಕೆಗೆ ಕಾರಣವಾಗಿದೆ.



» **ನಾಳೆಯೇ ಪ್ರಮಾಣಕ್ಕೆ ಮುಹೂರ್ತ**

**ಹೆಚ್ಚಿದ ಆಕಾಂಕ್ಷಿಗಳು:** ಹಿರಿತನ, ಪಕ್ಷ ನಿಷ್ಠೆ, ಪ್ರದೇಶ, ಜಿಲ್ಲೆ, ಸಮುದಾಯದ ಹೆಸರಿನಲ್ಲಿ ತಮ್ಮದೇ ಆದ ವಾದ ಮಂಡಿಸುವ ಮೂಲಕ ಆಕಾಂಕ್ಷಿಗಳೆಲ್ಲ ತಮ್ಮ ಅರ್ಹತೆ ಮಂಡಿಸುತ್ತಿದ್ದಾರೆ. ಸೋತವರಿಗೆ ಸಚಿವಗಾದಿ ಕೊಡಬೇಡಿ ಎಂಬ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ. ಇದರಿಂದಾಗಿ ಯಾರಿಗೆ ಸಿಹಿ, ಮತ್ಯಾರಿಗೆ ಕಹಿ ಎಂದು ದೃಢಪಟ್ಟ ಬಳಿಕ ಅಸಮಾಧಾನದ ಸ್ಪಷ್ಟ ರೂಪ ಪಡೆಯುವ ಲಕ್ಷಣಗಳಿವೆ.

▶ಪುಟ 9

### ನಿರೀಕ್ಷೆಯಲ್ಲಿರುವವರು

ಜಿ.ಎಚ್.ತಿಪ್ಪಾರೆಡ್ಡಿ, ಎಂ.ಪಿ.ರೇಣುಕಾಚಾರ್ಯ, ಎಂ.ಪಿ.ಕುಮಾರಸ್ವಾಮಿ, ಎಸ್.ಎ.ರಾಮದಾಸ್, ಎಸ್.ಅಂಗಾರ, ಅಪ್ಪಚ್ಚು ರಂಜನ್, ನರಸಿಂಹ ನಾಯಕ (ರಾಜೂಗೌಡ), ಹಾಲಪ್ಪ ಆಚಾರ್, ಕೆ.ಜಿ.ಬೋಪಯ್ಯ, ಸೋಮಶೇಖರರೆಡ್ಡಿ, ಅರವಿಂದ ಬೆಲ್ಲದ್, ಡಾ.ಶಿವರಾಜ ಪಾಟೀಲ್, ಸೋಮನಗೌಡ ಪಾಟೀಲ್ ಸಾಸನೂರು.

### ಕೆಲವರ ಖಾತೆ ಬದಲು?

ಹಲವು ಸಚಿವರ ಖಾತೆಗಳು ಬದಲಾವಣೆ ಆಗುವ ಸಂಭವವಿದೆ. ಈ ಪೈಕಿ ಗೃಹ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಅಬಕಾರಿ, ಕೈಗಾರಿಕೆ ಖಾತೆ ಬದಲಾವಣೆ ಮಾಡುವ ಕುರಿತು ಚರ್ಚೆ ನಡೆದಿದೆ.



ಸಂಪುಟ ವಿಸ್ತರಣೆಗೆ ವರಿಷ್ಠರು ಒಪ್ಪಿಗೆ ನೀಡಿದ್ದು, ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದ ದಿನಾಂಕವೂ ನಿಗದಿಯಾಗಿದೆ. ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಆಗಮಿಸಲಿದ್ದಾರೆ.

| ಬಿ.ವೈ.ವಿಜಯೇಂದ್ರ
ಉಪಾಧ್ಯಕ್ಷ, ರಾಜ್ಯ ಬಿಜೆಪಿ.

13

# ಸಂಪುಟ ಸಂಕ್ರಾಂತಿ

ಮೊದಲನೇ ಪುಟದಿಂದ.. ವಿ.ವಾ. 12-1-2021

**ಪ್ರಾತಿನಿಧ್ಯಕ್ಕಿಲ್ಲ ಅವಕಾಶ:** ಪೂರ್ಣ ಬಹುಮತ ಇಲ್ಲದೇ ಇದ್ದರೂ ಸಾಹಸ ಮಾಡಿ ಸರ್ಕಾರ ರಚಿಸಿಕೊಂಡ ಬಿ.ಎಸ್.ಯಡಿಯೂರಪ್ಪನವರಿಗೆ ಸಚಿವ ಸ್ಥಾನವನ್ನು ಪ್ರದೇಶವಾರು ಹಂಚಿಕೆ ಮಾಡಲು ಸಾಧ್ಯವಾಗಿಲ್ಲ. ಮುಂದೆ ನಡೆಯುವ ಸಂಪುಟ ವಿಸ್ತರಣೆ ಅಥವಾ ಸಂಪುಟ ಪುನಾರಚನೆ ವೇಳೆಯೂ ಸಹ ಜಿಲ್ಲೆಗೊಬ್ಬರಿಗೆ ಅವಕಾಶ ನೀಡಲು ಸಾಧ್ಯವಾಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಬೆಂಗಳೂರು ಮತ್ತು ಬೆಳಗಾವಿಗೆ ಹೆಚ್ಚಿನ ಸಚಿವ ಸ್ಥಾನ ಲಭ್ಯವಾಗಲಿದೆ. ವಲಸೆ ಬಂದ ಶಾಸಕರಿಗೆ ಸಚಿವ ಸ್ಥಾನ ಕೊಡಲೇಬೇಕಾದ ಪರಿಣಾಮ ಈ ವಾತಾವರಣವಿದೆ. ಜಾತಿವಾರು ಸಚಿವ ಸ್ಥಾನ ನೀಡಿ ಸಾಮಾಜಿಕ ನ್ಯಾಯ ಪರಿಪಾಲನೆಯೂ ಕಷ್ಟವಾಗಲಿದೆ, ಪಕ್ಷದಲ್ಲಿನ ಹಿರಿತನ, ಶಾಸಕ ಸ್ಥಾನದಲ್ಲಿನದ ಹಿರಿತನಕ್ಕೂ ಮಣೆ ಹಾಕಲಾಗುತ್ತಿಲ್ಲ.

## ಅತೃಪ್ತಿ ತಪ್ಪಿದ್ದಲ್ಲ

**ಸಂಪುಟಕ್ಕೆ ಸೇರುವವರ ಪಟ್ಟಿ ಅಂತಿಮವಾದರೂ ಬಳಿಕ ಆಕಾಂಕ್ಷಿಗಳ ಸಿಟ್ಟು-ಸೆಡವು ಭುಗಿಲೆದ್ದು ಮತ್ತೊಂದು ಸುತ್ತಿನ 'ಸಂ'ಕ್ರಾಂತಿ ಶುರುವಾಗುವ ಸಾಧ್ಯತೆ ನಿಚ್ಚಳವಾಗಿದೆ. ಸಂಪುಟ ವಿಸ್ತರಣೆಗೆ ಪಟ್ಟು ಹಿಡಿದವರ ಪೈಕಿ ಬಹುತೇಕರ ಅಪೇಕ್ಷೆ ಈಡೇರಿಸುವುದು ಬಿಎಸ್‌ವೈಗೂ ಅಸಾಧ್ಯ. ಖಾಲಿ ಇರುವ 7 ಸ್ಥಾನಗಳಿಗೆ 2 ಡಜನ್‌ಗೂ ಮಿಕ್ಕಿ ಆಕಾಂಕ್ಷಿಗಳಿದ್ದಾರೆ. ತಡವಾಗಿಯಾದರೂ 'ಸಂಪುಟ ಸಂಕಟ'ಕ್ಕೆ ತೆರೆ ಬಿದ್ದರೂ ಅತೃಪ್ತಿ ಮತ್ತೊಂದು ಸ್ವರೂಪ ಪಡೆಯುವ ಸಾಧ್ಯತೆಯನ್ನು ಬಿಎಸ್‌ವೈ ಗ್ರಹಿಸಿದ್ದಾರೆ. ಹಾಗೆಯೇ ಎಲ್ಲರಿಗೂ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟು ಸರಿಪಡಿಸುವ ವಿಶ್ವಾಸ ಹೊಂದಿದ್ದಾರೆ.**

**ಹಳೇ ಸ್ನೇಹಿತರಿಂದ ಸಂಕಟ:** ಸಿಎಂ ಬದಲಾವಣೆ ಇಲ್ಲ ಎಂದು ಪಕ್ಷದ ವರಿಷ್ಠರು ಪದೇಪದೆ ಸ್ಪಷ್ಟಪಡಿಸಿದರೂ ಮತ್ತೆ ವಿಷಯ ಪ್ರಸ್ತಾಪವಾಗುತ್ತಿರುವುದರ ಹಿಂದೆ ಸಿಎಂ ಬಳಗದಲ್ಲಿ ಈ ಹಿಂದೆ ಇದ್ದ ಕೆಲವರ ಕೈವಾಡ ಇರುವ ಶಂಕೆ ವ್ಯಕ್ತವಾಗಿದೆ. ಸರ್ಕಾರದ ಆಗುಹೋಗುಗಳಲ್ಲಿ ಪ್ರಮುಖಪಾತ್ರ ವಹಿಸಿ, ಬಳಿಕ ಆಂತರಿಕ ವೈಮನಸ್ಯದಿಂದ ಹೊರಹಾಕಲ್ಪಟ್ಟವರು ಈಗ ಸಂಪುಟ ವಿಸ್ತರಣೆ, ನಾಯಕತ್ವ ಬದಲಾವಣೆ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ ಎಂಬುದು ಆಡಳಿತ ಪಕ್ಷದ ಪ್ರಮುಖರ ಗಮನಕ್ಕೆ ಬಂದಿದೆ. ಈ ಬೆಳವಣಿಗೆಯಿಂದ ಪಕ್ಷ ಹಾಗೂ ಸರ್ಕಾರದ ಇಮೇಜ್‌ಗೂ ಧಕ್ಕೆ ಯಾಗುತ್ತಿರುವುದನ್ನು ಗಮನಿಸಿದ್ದು, ಈ ಬೆಳವಣಿಗೆಗೆ ವಿರಾಮ ಹಾಕುವ ಪ್ರಯತ್ನವೂ ನಡೆದಿದೆ ಎನ್ನಲಾಗಿದೆ.